ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1598
ಸದಸ್ಯರ ಹೆಸರು	ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ	11.03.2022
ಉತ್ತರಿಸುವ ಸಚಿವರು	ಕೃಷಿ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕರ್ನಾಟಕದಲ್ಲಿ ತೊಗರಿ ಕಣಜ ಕಲಬುರಗಿ, ಬೀದರ್, ಯಾದಗಿರಿ, ವಿಜಯಪುರ, ಬಾಗಲಕೋಟೆ, ಹಾವೇರಿ, ಧಾರವಾಡ ಜಿಲ್ಲೆಗಳಲ್ಲಿ 2020-21ನೇ ಸಾಲಿನಲ್ಲಿ ಬಿತ್ತನೆಯಾದ ತೊಗರಿ ಪ್ರದೇಶವೆಷ್ಟು; ಈ ಜಿಲ್ಲೆಗಳ ಪೈಕಿ ಹೆಚ್ಚಿನ ತೊಗರಿ ಬಿತ್ತನೆಯಾದ ಜಿಲ್ಲೆ ಯಾವುದು; (ಜಿಲ್ಲಾವಾರು ಪ್ರತ್ಯೇಕ ಮಾಹಿತಿ ನೀಡುವುದು)	ಕರ್ನಾಟಕದಲ್ಲಿ ತೊಗರಿ ಕಣಜ ಕಲಬುರಗಿ, ಬೀದರ್, ಯಾದಗಿರಿ, ವಿಜಯಪುರ,. ಬಾಗಲಕೋಟೆ, ಹಾವೇರಿ, ಧಾರವಾಡ ಜಿಲ್ಲೆಗಳಲ್ಲಿ 2020-21ನೇ ಸಾಲಿನಲ್ಲಿ ಬಿತ್ತನೆಯಾದ ತೊಗರಿ ಪ್ರದೇಶದ ವಿವರಗಳು ಈ ಕೆಳಕಂಡಂತಿವೆ.
ಆ)	ಈ ಜಿಲ್ಲೆಗಳಲ್ಲಿ ಎಷ್ಟು ಹೆಕ್ಟೇರ್ ತೊಗರಿ ಬಿತ್ತನೆಯಾಗಿದೆ;	

ಕ್ರ. ಸಂ.	ಜಿಲ್ಲೆಗಳು	ವಿಸ್ತೀರ್ಣ (ಹೆಕ್ಟೇರ್ ಗಳಲ್ಲಿ)
1	ಕಲಬುರಗಿ	581825
2	ಬೀದರ್	139653
3	ಯಾದಗಿರಿ	93739
4	ವಿಜಯಪುರ	514353
5	ಬಾಗಲಕೋಟೆ	51972
6	ಹಾವೇರಿ	132
7	ಧಾರವಾಡ	283
	ಒಟ್ಟು	**13,81,957**

2020-21ನೇ ಸಾಲಿನಲ್ಲಿ ಕಲಬುರಗಿ, ಬೀದರ್, ಯಾದಗಿರಿ, ವಿಜಯಪುರ, ಬಾಗಲಕೋಟೆ, ಹಾವೇರಿ, ಧಾರವಾಡ ಜಿಲ್ಲೆಗಳಲ್ಲಿ ಒಟ್ಟು 13,81,957 ಹೆಕ್ಟೇರ್ ಪ್ರದೇಶದಲ್ಲಿ ತೊಗರಿ ಬೆಳೆ ಬಿತ್ತನೆ ಮಾಡಲಾಗಿರುತ್ತದೆ.

ಮೇಲಿನ ಜಿಲ್ಲೆಗಳ ಪೈಕಿ ಕಲಬುರಗಿ ಜಿಲ್ಲೆಯಲ್ಲಿ ತೊಗರಿ ಬೆಳೆಯನ್ನು ಹೆಚ್ಚಿನದಾಗಿ ಬಿತ್ತನೆ ಮಾಡಲಾಗಿರುತ್ತದೆ.

ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

<table>
<tr>
<td>ಇ)</td>
<td>ಕಲಬುರಗಿ ಜಿಲ್ಲೆಯಲ್ಲಿ ತೊಗರಿ ಬಿತ್ತನೆ ಪ್ರದೇಶ ಕುಗ್ಗುತ್ತಿದೆಯೇ; ಹಾಗಿದ್ದಲ್ಲಿ, ಈ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ತೊಗರಿ ಬಿತ್ತನೆ ಪ್ರದೇಶದಿಂದ ಬಂದ ಇಳುವರಿಯೆಷ್ಟು? (ಮಾಹಿತಿ ನೀಡುವುದು)</td>
<td>ಕಲಬುರಗಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ತೊಗರಿ ಬಿತ್ತನೆ ಪ್ರದೇಶವು ಕುಗ್ಗುತ್ತಿದ್ದರೂ ಸಹ ಉತ್ಪಾದನೆ ಹಾಗೂ ಇಳುವರಿಯು ಏರಿಕೆಯಾಗಿರುವುದು ಕಂಡುಬಂದಿರುತ್ತದೆ.

ಕಲಬುರಗಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ತೊಗರಿ ಬೆಳೆಯ ವಿಸ್ತೀರ್ಣ, ಉತ್ಪಾದನೆ ಹಾಗೂ ಇಳುವರಿಯ ಮಾಹಿತಿಯು ಈ ಕೆಳಕಂಡಂತಿದೆ.
<table>
<tr><th>ಕ್ರ. ಸಂ</th><th>ವರ್ಷ</th><th>ವಿಸ್ತೀರ್ಣ (ಹೆಕ್ಟೇರ್ ಗಳಲ್ಲಿ)</th><th>ಉತ್ಪಾದನೆ (ಟನ್ ಗಳಲ್ಲಿ)</th><th>ಇಳುವರಿ (ಕೆ.ಜಿ./ಹೆಕ್ಟೇರ್ ಗಳಲ್ಲಿ)</th></tr>
<tr><td>1</td><td>2018-19</td><td>613760</td><td>569078</td><td>976</td></tr>
<tr><td>2</td><td>2019-20</td><td>606717</td><td>523354</td><td>908</td></tr>
<tr><td>3</td><td>2020-21</td><td>581825</td><td>622553</td><td>1070</td></tr>
</table>
ಮೂಲ: ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯವರ ವಿಸ್ತೀರ್ಣ, ಉತ್ಪಾದನೆ ಹಾಗೂ ಇಳುವರಿಯ ಅಂತಿಮ ಅಂದಾಜು ವರದಿಯ ಪ್ರಕಾರ</td>
</tr>
<tr>
<td>ಈ)</td>
<td>ತೊಗರಿ ಮಂಡಳಿ ಸ್ಥಾಪನೆ ಆಗಿದ್ದು, ತೊಗರಿ ಮಂಡಳಿಯಲ್ಲಿ ಎಷ್ಟು ಜನ ರೈತರು ಖರೀದಿಗೆ ಈ ವರ್ಷದಲ್ಲಿ ನೋಂದಣಿ ಮಾಡಿದ್ದಾರೆ;
ಮಂಡಳಿಯಿಂದ ರೈತರು ಬೆಳೆದ ಎಷ್ಟು ತೊಗರಿಯನ್ನು ಖರೀದಿ ಮಾಡಿದ್ದಾರೆ; (ವರ್ಷವಾರು ವಿವರ ನೀಡುವುದು)</td>
<td>ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿ ನಿ., ಕಲಬುರಗಿ (ಹಿಂದಿನ ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿ) ಸಂಸ್ಥೆಯು ಮಾರ್ಚ 2002ರಲ್ಲಿ ಸ್ಥಾಪನೆಯಾಗಿರುತ್ತದೆ.
<table>
<tr><th>ಕ್ರ. ಸಂ</th><th>ವಿವರ</th><th>ಪ್ರಮಾಣ (ಕ್ವಿಂಟಾಲ್‌ಗಳಲ್ಲಿ)</th><th>ಖರೀದಿಸಲಾದ ತೊಗರಿ ಮೊತ್ತ</th></tr>
<tr><td>1.</td><td>2019-20ನೇ ಸಾಲಿನಲ್ಲಿ ಕೇಂದ್ರ ಸರಕಾರದ ಬೆಂಬಲ ಬೆಲೆ ರೂ.5800/-, ರಾಜ್ಯ ಸರಕಾರದ ಪ್ರೋತ್ಸಾಹ ಧನ ರೂ.300/-ರಂತೆ ಒಟ್ಟು ಪ್ರತಿ ಕ್ವಿಂಟಾಲ್‌ಗೆ ರೂ.6100/- ನಿಗದಿಪಡಿಸಲಾಗಿರುತ್ತದೆ. ಕ್ರಮವಾಗಿ ಕಲಬುರಗಿಯಿಂದ 33512 ಮತ್ತು ಯಾದಗಿರಿ ಜಿಲ್ಲೆಯಿಂದ 943 ಒಟ್ಟು 34,455 ರೈತರಿಂದ ತೊಗರಿ ಖರೀದಿ ಮಾಡಲಾಗಿರುತ್ತದೆ.</td><td>315812.00</td><td>192,64,53,200.00</td></tr>
</table></td>
</tr>
</table>

<table>
<tr>
<td></td>
<td>
<table>
<tr><td>2.</td><td>2020-21ನೇ ಸಾಲಿನಲ್ಲಿ ಕೇಂದ್ರ ಸರಕಾರದ ಬೆಂಬಲ ಬೆಲೆ ಪ್ರತಿ ಕ್ವಿಂಟಾಲ್‌ಗೆ ರೂ.6000/-ರಂತೆ ತೊಗರಿ ಖರೀದಿಸಲು ರಾಜ್ಯ ಸರಕಾರ ಮಂಜೂರು ಮಾಡಲಾಗಿರುತ್ತದೆ. ಕ್ರಮವಾಗಿ ಕಲಬುರಗಿ ಜಿಲ್ಲೆಯಿಂದ 13348 ಮತ್ತು ಯಾದಗಿರಿ ಜಿಲ್ಲೆಯಿಂದ 2729 ಒಟ್ಟು 16077 ರೈತರ ನೋಂದಣಿಯಾಗಿರುತ್ತದೆ. ಕೇಂದ್ರ ಸರ್ಕಾರದ ಬೆಂಬಲ ಬೆಲೆಗಿಂತ ಮಾರುಕಟ್ಟೆ ಬೆಲೆ ಹೆಚ್ಚಿನ ದರದಲ್ಲಿ ಮಾರಾಟವಾಗಿರುವುದರಿಂದ ಮಂಡಳಿ ವತಿಯಿಂದ ತೊಗರಿ ಖರೀದಿ ಪ್ರಕ್ರಿಯೆ ನಡೆದಿರುವುದಿಲ್ಲ.</td></tr>
<tr><td>3.</td><td>2021-22ನೇ ಸಾಲಿನಲ್ಲಿ ಕೇಂದ್ರ ಸರಕಾರದ ಬೆಂಬಲ ಬೆಲೆ ಪ್ರತಿ ಕ್ವಿಂಟಾಲ್‌ಗೆ ರೂ.6300/-ರಂತೆ ರೈತರಿಂದ ತೊಗರಿ ಖರೀದಿಸಲು ನಿಗದಿಪಡಿಸಲಾಗಿರುತ್ತದೆ. ಅದರಂತೆ ಕ್ರಮವಾಗಿ ಕಲಬುರಗಿ ಜಿಲ್ಲೆಯಲ್ಲಿ 4542 ಮತ್ತು ಯಾದಗಿರಿ ಜಿಲ್ಲೆಯಲ್ಲಿ 516 ಜನ ರೈತರ ನೋಂದಣಿಯಾಗಿರುತ್ತದೆ. ಮಂಡಳಿ ವತಿಯಿಂದ ತೊಗರಿ ಖರೀದಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.</td></tr>
</table>
</td>
</tr>
<tr>
<td>ತೊಗರಿ ಖರೀದಿಗೆ ಪ್ರತಿ ಕ್ವಿಂಟಾಲ್‌ಗೆ ಸರ್ಕಾರ ಬೆಂಬಲ ಬೆಲೆ ನಿಗದಿಪಡಿಸಲಾಗಿದೆಯೇ; ಹಾಗಿದ್ದಲ್ಲಿ, ಮಾರುಕಟ್ಟೆಯಲ್ಲಿ ರೈತರಿಗೆ ಸಿಗುವ ಪ್ರತಿ ಕ್ವಿಂಟಾಲ್ ಗೆ ಬೆಲೆ ಎಷ್ಟು; ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ವಿವರ ನೀಡುವುದು)</td>
<td>ಹೌದು.

2021-22ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಎಫ್.ಎ.ಕ್ಯೂ ಗುಣಮಟ್ಟದ ಪ್ರತಿ ಕ್ವಿಂಟಾಲ್ ತೊಗರಿಗೆ ರೂ.6,300/- ನಿಗದಿಪಡಿಸಲಾಗಿರುತ್ತದೆ.

ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಬೇಡಿಕೆ ಮತ್ತು ಪೂರೈಕೆ ಆಧಾರದಲ್ಲಿ ಬೆಲೆಗಳು ನಿರ್ಧಾರವಾಗುತ್ತದೆ. ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ ಕಲಂ 76ರಡಿ ನಿರ್ದಿಷ್ಟಪಡಿಸಿರುವಂತೆ ಅಧಿಸೂಚಿತ ಕೃಷಿ ಉತ್ಪನ್ನದ ಮಾರಾಟ ಬೆಲೆಯನ್ನು ಇ-ಟೆಂಡರ್ ಪದ್ಧತಿ ಅಥವಾ ಸಾರ್ವಜನಿಕ ಹರಾಜು ಅಥವಾ ಬಹಿರಂಗ ಒಪ್ಪಂದ ಅಥವಾ ಮಾದರಿ ಗುಣಮಟ್ಟದ ಆಧಾರದ ಮೂಲಕ ನಿರ್ಧರಿಸಲಾಗುತ್ತದೆ.</td>
</tr>
</table>

ಸಂಖ್ಯೆ: AGRI-ACT/50/2022

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

ಅನುಬಂಧ

2020-21ನೇ ಸಾಲಿನ ಜಿಲ್ಲಾವಾರು ತೊಗರಿ ಬಿತ್ತನೆಯಾದ ವಿಸ್ತೀರ್ಣದ ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.

ಕ್ರ.ಸಂ.	ಜಿಲ್ಲೆಗಳು	ವಿಸ್ತೀರ್ಣ (ಹೆಕ್ಟೇರ್ ಗಳಲ್ಲಿ)
1	ಬಾಗಲಕೋಟೆ	51972
2	ಬೆಂಗಳೂರು ಗ್ರಾಮಾಂತರ	681
3	ಬೆಂಗಳೂರು ನಗರ	1049
4	ಬೆಳಗಾವಿ	14452
5	ಬಳ್ಳಾರಿ	13902
6	ಬೀದರ್	139653
7	ವಿಜಯಪುರ	514353
8	ಚಾಮರಾಜನಗರ	368
9	ಚಿಕ್ಕಬಳ್ಳಾಪುರ	3477
10	ಚಿಕ್ಕಮಗಳೂರು	267
11	ಚಿತ್ರದುರ್ಗ	4883
12	ದಕ್ಷಿಣ ಕನ್ನಡ	0
13	ದಾವಣಗೆರೆ	510
14	ಧಾರವಾಡ	283
15	ಗದಗ	563
16	ಕಲಬುರಗಿ	581825
17	ಹಾಸನ	730
18	ಹಾವೇರಿ	132
19	ಕೊಡಗು	2
20	ಕೋಲಾರ	1233
21	ಕೊಪ್ಪಳ	33896
22	ಮಂಡ್ಯ	605
23	ಮೈಸೂರು	3288
24	ರಾಯಚೂರು	153093
25	ರಾಮನಗರ	1745
26	ಶಿವಮೊಗ್ಗ	67
27	ತುಮಕೂರು	14058
28	ಉಡುಪಿ	1
29	ಉತ್ತರಕನ್ನಡ	12
30	ಯಾದಗಿರಿ	93739
ಒಟ್ಟು		**1630839**

ಮೂಲ: ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯವರ 2020-21ರ ವಿಸ್ತೀರ್ಣ, ಉತ್ಪಾದನೆ ಹಾಗೂ ಇಳುವರಿಯ ಅಂತಿಮ ಅಂದಾಜು ವರದಿಯ ಪ್ರಕಾರ.